

# ನಿಮ್ಮ ಕಾರುಗಳೆಷ್ಟು ಸುರಕ್ಷಿತ?

**ಕ್ರಾಶ್ ಟೆಸ್ಟಿನಲ್ಲಿ ಭಾರತದ ಕಾರುಗಳೇಕೆ ವಿಫಲವಾಗುತ್ತಿವೆ? ಅಂತರರಾಷ್ಟ್ರೀಯ ಮಟ್ಟದ ಸುರಕ್ಷಾ ನಿಯಮಗಳನ್ನು ಭಾರತದ ಕಾರುಗಳಲ್ಲಿ ಅಳವಡಿಸಲು ಇನ್ನೂ ಎಷ್ಟು ಸಮಯ ಕಾಯಬೇಕು?**

★ ಜಯಸಿಂಹ ಆರ್.

ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ, ಸಾವುಗಳು ಸಂಖ್ಯೆಯೂ ಏರುತ್ತಿದೆ. ರಸ್ತೆ ಅಪಘಾತಗಳ ಸಾವಿನ ಪಟ್ಟಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಭಾರತ ಮೊದಲ ಸ್ಥಾನದಲ್ಲೇ ಇದೆ. ಇದಕ್ಕೆ ಕಾರಣಗಳು ಹಲವಾರು. ವೈಜ್ಞಾನಿಕವಾಗಿ ರೂಪುಗೊಳ್ಳದ ರಸ್ತೆಗಳು, ಅಜಾಗರೂಕ ಚಾಲನೆ ಮತ್ತು ಸುರಕ್ಷತಾ ನಿಟ್ಟಿನಲ್ಲಿ ಕಳಪೆ ಗುಣಮಟ್ಟದ ವಾಹನಗಳು ಪ್ರಮುಖ ಕಾರಣ ಎಂದು ಕೇಂದ್ರ ಸರ್ಕಾರ ಈಚೆಗೆ ಬಿಡುಗಡೆ ಮಾಡಿದ 'ರಸ್ತೆ ಸುರಕ್ಷತಾ ವರದಿ–2015' ವಿವರಿಸಿದೆ.

ಹಲವು ಜಾಗತಿಕ ಸಂಸ್ಥೆಗಳು ನಡೆಸಿದ ಸಮೀಕ್ಷೆ ಮತ್ತು ವಿಶ್ಲೇಷಣೆಗಳಲ್ಲೂ, ಭಾರತದ ಅತ್ಯಧಿಕ ರಸ್ತೆ ಅಪಘಾತಗಳಿಗೆ ಇದೇ ಅಂಶಗಳು ಕಾರಣ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲೇ 'ಗ್ಲೋಬಲ್ ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂ' (ಗ್ಲೋಬಲ್ ಎನ್‌ಸಿಎಪಿ) ಕಳೆದ ವರ್ಷ ಭಾರತದಲ್ಲಿ ಅತಿ ಹೆಚ್ಚು ಮಾರಾಟವಾಗುತ್ತಿರುವ ಏಳು ಕಾರ್‌ಗಳನ್ನು ಕ್ರಾಶ್ ಟೆಸ್ಟ್ ಗಳಿಗೆ ಒಳಪಡಿಸಿತು. ಅಷ್ಟೂ ಕಾರ್‌ಗಳು ಕ್ರಾಶ್ ಟೆಸ್ಟ್‌ನಲ್ಲಿ ಶೂನ್ಯ ಅಂಕ ಪಡೆದವು. ಆ ಏಳೂ ಕಾರ್‌ಗಳನ್ನು, ಭಾರತದಲ್ಲಿನ ಆ ಕಂಪೆನಿಗಳ ಮಳಿಗೆಗಳಿಂದ ಖರೀದಿ ಮಾಡಿ ಗ್ಲೋಬಲ್ ಎನ್‌ಸಿಎಪಿ ಪರೀಕ್ಷೆ ನಡೆಸಿತ್ತು. ವಿಪರ್ಯಾಸವೆಂದರೆ ಈ ಏಳೂ ಕಾರ್‌ಗಳ ಕೆಲವು ಮಾದರಿಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿವೆ. ಅಂತರರಾಷ್ಟ್ರೀಯ ಅವತರಣಿಕೆಗಳು ಕ್ರಾಶ್ ಟೆಸ್ಟ್‌ನಲ್ಲಿ ಉತ್ತಮ ರೇಟಿಂಗ್ ಪಡೆದಿದ್ದವು.

ಕ್ರಾಶ್ ಟೆಸ್ಟ್‌ನ ಫಲಿತಾಂಶ ಬಹಿರಂಗವಾಗುತ್ತಿದ್ದಂತೆಯೇ ಕಂಪೆನಿಗಳು, 'ಭಾರತ ಸರ್ಕಾರ ರೂಪಿಸಿರುವ ನಿಯಮಗಳಿಗೆ ಬದ್ಧವಾಗಿ ನಮ್ಮ ಕಾರ್‌ಗಳನ್ನು ರೂಪಿಸಿದ್ದೇವೆ' ಎಂದು ಸರ್ಕಾರದ ಮೇಲೆ ಹೊಣೆ ಹೊರಿಸಿ, ಕೈತೊಳೆದುಕೊಂಡಿದ್ದವು. ಇದನ್ನೆಲ್ಲಾ ಗಂಭೀರವಾಗಿ